ಅನುಬಂಧ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 526ರ ಉತ್ತರಕ್ಕೆ ಅನುಬಂಧ

ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿನಿಲಯಗಳಿಗೆ ಬಾಡಿಗೆಗೆ ಖರ್ಚು ಮಾಡುವ ಹಣದ ವಿವರ ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ವಿದ್ಯಾರ್ಥಿನಿಲಯಗಳ ಹೆಸರು	ಮಾಹೆಯಾನ ನಿಗಧಿ ಪಡಿಸಿರುವ ಬಾಡಿಗೆ
ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ		**ರೂ. ಗಳು**
1.	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಬಸವೇಶ್ವರ ನಗರ	3500-00
2.	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ರಾಜಾಜಿನಗರ	2493-00
3.	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಕಾವಲ್‌ಬೈರಸಂದ್ರ	ಇನ್ನೂ ಬಾಡಿಗೆ ನಿಗಧಿಪಡಿಸಿರುವುದಿಲ್ಲ.
4.	ಮೆಟ್ರಿಕ್‌ನಂತರದ ಬಾಲಕರ ವಿದ್ಯಾರ್ಥಿನಿಲಯ, ವಿಜಯನಗರ	3000-00
5.	ಮೆಟ್ರಿಕ್‌ನಂತರದ ಬಾಲಕರ ವಿದ್ಯಾರ್ಥಿನಿಲಯ, ಗಂಗೇನಹಳ್ಳಿ	4700-00
6.	ಮೆಟ್ರಿಕ್‌ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ವಸಂತನಗರ	1900-00
7.	ಮೆಟ್ರಿಕ್‌ನಂತರದ ಬಾಲಕರ ವಿದ್ಯಾರ್ಥಿನಿಲಯ, ದಾಸರಹಳ್ಳಿ	8377-00
	ಒಟ್ಟು	23970-00

ಸಮಾಜ ಕಲ್ಯಾಣ ಇಲಾಖೆ		
1.	ಸಾರ್ವಜನಿಕ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಎಂ.ಆರ್.ಸಿ. ಲೇಔಟ್, ಬೆಂಗಳೂರು	20950-00
2.	ಸಾರ್ವಜನಿಕ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಲಿಂಗರಾಜಪುರ	3000-00
3.	ಸಾರ್ವಜನಿಕ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ, ಮಲ್ಲತ್ತಹಳ್ಳಿ	1205-00
4.	ಜನರಲ್ ಹಾಸ್ಟೆಲ್ ಸರಾಗಮಿತ್ರ ಬಾಲಕೀಯರ ವಿದ್ಯಾರ್ಥಿನಿಲಯ, ವಿಜಯನಗರ	100-00
5.	ಜನರಲ್ ಹಾಸ್ಟೆಲ್ ಆಂಧ್ರ ಎಜುಕೇಶನ್ ಸೊಸೈಟಿ ಡಿ.ಸಿ. ಹಾಸ್ಟೆಲ್, ಜಾಲಹಳ್ಳಿ	100-00
6.	ಆರ್.ಸಿ. ಕಾಲೇಜು ಬಾಲಕರ ವಿದ್ಯಾರ್ಥಿನಿಲಯ	1300-00
	ಒಟ್ಟು	26650-00

ರೇಷ್ಮೆ ಇಲಾಖೆಯಲ್ಲಿ ಬೆಲೆ ಸ್ಥಿರೀಕರಣ ಪ್ರಾಧಿಕಾರ ನಿಧಿ ಕುರಿತು

646 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯಲ್ಲಿ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಯಾವಾಗಿನಿಂದ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡುತ್ತಿದೆ?

ಆ) ಯಾವ ನಿಬಂಧನೆಗಳ ಮೇರೆಗೆ ಹಣವನ್ನು ಬಿಡುಗಡೆ ಮಾಡಿದೆ?

ಇ) ನಿರ್ದಿಷ್ಟ ವಿಷಯಗಳಿಗೆ ಈ ಹಣವನ್ನು ಉಪಯೋಗಿಸಲಾಗಿದೆಯೇ ?

ಡಾ ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಕೆಳಗಿನ ಸಂಸ್ಥೆಗಳಿಗೆ ಅವುಗಳ ಮುಂದೆ ಸೂಚಿಸಿರುವ ದಿನಾಂಕದಿಂದ ಹಣ ಬಿಡುಗಡೆ ಮಾಡಲಾಗುತ್ತಿದೆ.

1. ರೇಷ್ಮೆ ನೂಲು ಬಿಚ್ಚುವ ಸಹಕಾರ ಸಂಘಗಳು	1985-86
2. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ	1987-88
3. ಕರ್ನಾಟಕ ರೇಷ್ಮ ಕೈಗಾರಿಕಾ ನಿಗಮ	1990-91
4. ಕರ್ನಾಟಕ ರೇಷ್ಮೆ ಕೃಷಿ ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ	1992-93

ಆ) **1. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ :**

ನಿಬಂಧನೆಗಳು :

ಅ) ಸಂಸ್ಥೆಯು ಕಷ್ಟ ಸಮಯದಲ್ಲಿ ರೇಷ್ ವಿನಿಮಯ ಕೇಂದ್ರದಲ್ಲಿ ರೇಷ್ಮೆ ನೂಲು ಖರೀದಿಸುವುದು.

ಆ) ಸದರಿ ಹಣವನ್ನು ಸಂಪೂರ್ಣವಾಗಿ ರೇಷ್ಮೆಯನ್ನು ಖರೀದಿಸುವುದಕ್ಕೆ ಉಪಯೋಗಿಸಿಕೊಳ್ಳಲಾಗುವುದು.

ಇ) ಅಲ್ಪಾವಧಿ ಸಾಲವಾಗಿ ಕೊಡುವ ಹಣಕ್ಕೆ ಶೇಕಡ 10 ರಷ್ಟು ಬಡ್ಡಿಯನ್ನು ಕೊಡುವುದು.

ಈ) ಮೂಲ ಹಣಕ್ಕೆ ಶೇಕಡ 2 ರಷ್ಟು ಬಡ್ಡಿಯನ್ನು ಕೊಡುವುದು.

2. ರೇಷ್ಮೆ ನೂಲು ಬಿಚ್ಚುವ ಸಹಕಾರ ಸಂಘಗಳು :

ನಿಬಂಧನೆಗಳು

ಅ) ಸಾಲ ಮರುಪಾವತಿ ಮಾಡುವುದು.

ಆ) ರೇಷ್ಮೆ ನೂಲು ಬಿಚ್ಚುವವರು ಸಾಲವನ್ನು ಬಡ್ಡಿಯಲ್ಲಿ ಶೇಕಡ 50 ರಷ್ಟನ್ನು ನಿಗದಿತ ದಿನಗಳಲ್ಲಿ ಮರುಪಾವತಿ ಮಾಡಿದರೆ ಅವರಿಗೆ ಶೇಕಡ 50 ರಷ್ಟು ಬಡ್ಡಿ ಹಾಗೂ ಶೇಕಡ 100 ರಷ್ಟು ಸುಸ್ತಿ ಬಡ್ಡಿಯನ್ನು ಕೊಡುವುದು.

ಇ) ರೇಷ್ಮೆ ಒತ್ತೆಯಿಟ್ಟುಕೊಳ್ಳುವ ಸಲುವಾಗಿ

ಅ) ಸಣ್ಣ ರೇಷ್ಮೆ ನೂಲು ಬಿಚ್ಚುವವರಿಗೆ ಆದ್ಯತೆಯನ್ನು ನೀಡುವುದು.

ಆ) ರೂ. 25,000ಕ್ಕೆ ಮೀರದಂತೆ ಸಾಲವನ್ನು ನೂಲು ಬಿಚ್ಚಾಣಿಕೆದಾರರಿಗೆ ಕೊಡುವುದು.

ಇ) ಸಾಲದ ಸೌಲಭ್ಯವನ್ನು 60 ದಿನಗಳಿಗೆ ಮೀರದಂತೆ ಕೊಡುವುದು.

ಈ) ಒತ್ತೆಯಿಟ್ಟುಕೊಂಡು ರೇಷ್ಮೆಯನ್ನು ರೇಷ್ಮೆ ವಿನಿಮಯ ಕೇಂದ್ರದಲ್ಲಿ ವಿಲೇವಾರಿ ಮಾಡುವುದು.

3. ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ :

ನಿಬಂಧನೆಗಳು

ಈ ನಿಗಮಕ್ಕೆ ಟಿ. ನರಸೀಪುರದ ರೇಷ್ಮೆ ಕಾರ್ಖಾನೆ ನಷ್ಟ ತುಂಬಲು ಹಾಗೂ ಕನಕಪುರದ ರೇಷ್ಮ ಕೈಗಾರಿಕೆಯ ಸುಧಾರಣೆಗೆ ಹಣ ಬಿಡುಗಡೆ ಮಾಡುವುದು.

4. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ

ನಿಬಂಧನೆಗಳು

ಪ್ರತಿ ವರ್ಷವೂ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದಿರಬೇಕು

ಅ) ಬಿಡುಗಡೆ ಮಾಡಲಾದ ಹಣವನ್ನು ನಿರ್ದಿಷ್ಟ ಯೋಜನೆಗಳಿಗೆ ಮಾತ್ರ ಉಪಯೋಗಿಸುವುದು.

ಆ) ಹಣವನ್ನು ಸಂಬಳ ಸಾರಿಗೆಗಳಿಗೆ ಉಪಯೋಗಿಸಬಾರದು.

ಇ) ಸಮಯಕ್ಕೆ ಸರಿಯಾಗಿ ಖರ್ಚಿನ ವಿವರಗಳನ್ನು ಬೆಲೆ ಸ್ಥಿರೀಕರಣ ನಿಧಿಗೆ ನೀಡಬೇಕು. ಪ್ರಗತಿಯನ್ನು ಪ್ರತಿ ಸಾರಿಯೂ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರಕ್ಕೆ ಒದಗಿಸಿ ಅದನ್ನು ವಿಸ್ತರಣಾ ಕಾರ್ಯಕ್ರಮದಲ್ಲಿ ಅಳವಡಿಸುವ ಬಗ್ಗೆ ವ್ಯವಸ್ಥೆ ಮಾಡಿ ಸದರಿ ಉಪಯೋಗವನ್ನು ರೇಷ್ಮೆ ಬೆಳಿಗಾರರಿಗೆ ತಲುಪುವಂತೆ ಮಾಡುವುದು.

3) ನಿರ್ದಿಷ್ಟ ಕಾರ್ಯಕ್ರಮಗಳಿಗೆ ಹಣವನ್ನು ಉಪಯೋಗಿಸಲಾಗಿದೆ.

ಸಾರ್ವಜನಿಕರಿಗೆ ಕಪ್ಪು ಮತ್ತು ಕೆಂಪು ಶಿಲೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮ

647 - ಶ್ರೀ ಸಾದತ್ ಅಲೀಖಾನ್ (ಚನ್ನಪಟ್ಟಣ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕರಿಗೆ ಕಪ್ಪು ಮತ್ತು ಕೆಂಪು ಶಿಲೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಆ) ಸಾರ್ವಜನಿಕರಿಗೆ ಕೆಂಪು ಮತ್ತು ಕಪ್ಪು ಶಿಲೆ ನೀಡಲು ಅನುಸರಿಸುವ ವಿಧಾನಗಳು?

ಇ) ಕಾರ್ಖಾನೆಯನ್ನು ಹೊಂದಿರುವವರಿಗೆ ಮಾತ್ರ ಕೆಂಪು ಮತ್ತು ಕಪ್ಪು ಶಿಲೆ ಮಂಜೂರು ಮಾಡುವ ಉದ್ದೇಶವೇನು?

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) ಉಭಯ ಸದನಗಳ ಸಮಿತಿಯು ಇತ್ತೀಚೆಗೆ ಉಪಖನಿಜಗಳ ನೀತಿಯ ಮೇಲೆ ತನ್ನ ವರದಿಯನ್ನು ಸಲ್ಲಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲೆ ಕಾಣಿಸಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಮೇಲೆ ಕಾಣಿಸಿರುವ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಮಾಡಿಕೊಂಡ ಅರ್ಜಿಗಳು ಹಾಗೂ ಕಂಪನಿಯಿಂದ ಅನುಮತಿಗಾಗಿ ಕಾದಿರುವ ಕಾರ್ಖಾನೆಗಳ ವಿವರ

471 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?